ಮೆ: ಶಿವಶಕ್ತಿ ಸಕ್ಕರೆ ಕಾರ್ಖಾನೆ ನಿಯಮಿತ, ಇವರು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕು, ಸರ್ವೆ ನಂ. 177(ಭಾಗ), 178/1A, 178/1B& 178/2, ಸೌಂದತ್ತಿ ಗ್ರಾಮ ಮತ್ತು ಸರ್ವೆ ನಂ. 5/1, 6/1, 6/1B, 6/2A, 6/2B, 7/2, 95/2, 95/3, 98/1A, 98/1B-1, 98/1ಅ, 98/2, 99/1, 99/2, 99/3 & 99/4 ಯಡ್ರಾವಿ ಗ್ರಾಮಗಳಲ್ಲಿ ಸ್ಥಾಪಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 10,000 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 15 ಮೆ.ವ್ಯಾ ನಿಂದ 60 ಮೆ.ವ್ಯಾ ಹೆಚ್ಚಿಸುವ ಕುರಿತು ಕರೆಯಲಾದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

ದಿನಾಂಕ : **12-08-2016**

ಸಮಯ : **11.00 ಗಂಟೆ ಬೆಳಿಗ್ಗೆ**

ಸ್ಥಳ : **ಯೋಜನೆಯ ಸ್ಥಳದಲ್ಲಿ**

- ಮೆ: ಶಿವಶಕ್ತಿ ಸಕ್ಕರೆ ಕಾರ್ಖಾನೆ ನಿಯಮಿತ, ಈ ಸಂಸ್ಥೆಯು ತನ್ನ ಸಮುದಾಯಿ ಕಚೇರಿಯನ್ನು ಮಯೂರ ಚಿತ್ರಮಂದಿರ ರಸ್ತೆ, ಅಂಕಲಿ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ, ಕರ್ನಾಟಕ ರಾಜ್ಯ, ಈ ಸ್ಥಳದಲ್ಲಿ ಹೊಂದಿದ್ದು ಹಾಗೂ ಇದು ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಬೆಳಗಾವಿ ಜಿಲ್ಲೆಯ, ರಾಯಬಾಗ ತಾಲ್ಲೂಕಿನ, ಸೌಂದತ್ತಿ ಮತ್ತು ಯಡ್ರಾವಿ ಗ್ರಾಮಗಳಲ್ಲಿ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 10,000 ಟಿಸಿಡಿ ಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 15 ಮೆ.ವ್ಯಾ ನಿಂದ 60 ಮೆ.ವ್ಯಾ ಹೆಚ್ಚಿಸುವುದು.

**ಯೋಜನೆ ಸ್ಥಳದ ವಿವರಗಳು:-**

- ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ, ರಾಯಬಾಗ ತಾಲ್ಲೂಕು, ಸರ್ವೆ ನಂ. 177(ಭಾಗ), 178/1A, 178/1B& 178/2, ಸೌಂದತ್ತಿ ಗ್ರಾಮ ಮತ್ತು ಸರ್ವೆ ನಂ. 5/1, 6/1A, 6/1B, 6/2A, 6/2B, 7/2, 95/2, 95/3, 98/1A, 98/1B-1, 98/1ಅ, 98/2, 99/1, 99/2, 99/3 & 99/4 ಯಡ್ರಾವಿ ಗ್ರಾಮಗಳಲ್ಲಿ ಸ್ಥಾಪಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 10,000 ಟಿಸಿಡಿ ಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 15 ಮೆ.ವ್ಯಾ ನಿಂದ 60 ಮೆ.ವ್ಯಾ ಹೆಚ್ಚಿಸುವುದು.

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

ಸದರಿ ಸಾರ್ವಜನಿಕ ವಿಚಾರಣಾ ಸಭೆಯನ್ನು ಪರಿಸರ ಸಂರಕ್ಷಣೆ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2006ರ ತಿದ್ದುಪಡಿ ದಿನಾಂಕವು 01-12-2009ರ ಮೇರೆಗೆ ಜರುಗಿಸಲಾಯಿತು.

-: ಸಾರ್ವಜನಿಕ ವಿಚಾರಣಾ ಮಂಡಳಿ :-

ಹಾಜರಿದ್ದ ಸಾರ್ವಜನಿಕ ವಿಚಾರ ಮಂಡಳಿ ಸದಸ್ಯರು

| | |
|---|---|
| ಶ್ರೀ ಎನ್. ಜಯರಾಮ, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ. | ಅಧ್ಯಕ್ಷರು. |
| **ಶ್ರೀ. ಸಿ.ಡಿ. ಕುಮಾರ,** ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ. | ಸದಸ್ಯರು |
| **ಶ್ರೀ ಎಮ್. ಎ. ಮನಿಯಾರ,** ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ ಕೇಂದ್ರ). | ಸದಸ್ಯರು |

**ಮೆ. ಶಿವಶಕ್ತಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಸ್ಥೆಯ ಪ್ರತಿನಿಧಿಗಳು(ಯೋಜನೆಯ ಪ್ರತಿಪಾದಕರು)**

| | | |
|---|---|---|
| 1 | ಶ್ರೀ ವಿ. ಜೆ. ರವಿ | ಮುಖ್ಯ ಆಡಳಿತ ಅಧಿಕಾರಿಗಳು |
| 2 | ಶ್ರೀ ಎಚ್. ಡಿ. ಧರಿಗೌಡಾ. | ಕಬ್ಬು ವ್ಯವಸ್ಥಾಪಕ |
| | ಶ್ರೀ ಗಿರಿಧರ ಗಲಾಂಡೆ. | ಸಾಮಾನ್ಯ ವ್ಯವಸ್ಥಾಪಕ |
| 4 | ಶ್ರೀ ಸಂಜಯ ಎಸ್. ಯಾದವ | ಕಾಮಗಾರಿ ಅಭಿಯಂತರರು |
| 5 | ಶ್ರೀ ಎಚ್. ನ್ಯಾಮಗೌಡರ | ಸಾಮಾನ್ಯ ವ್ಯವಸ್ಥಾಪಕರು (ಸಹ ವಿದ್ಯುತ್) |
| 6 | ಶ್ರೀ ಬಿ. ಎಸ್. ಸಿದ್ಧನ್ನವರ. | ವ್ಯವಸ್ಥಾಪಕರು |

ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯದ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯ ದಿನಾಂಕ: 14-09-2006 (ತಿದ್ದುಪಡಿ ಅಧಿಸೂಚನೆ ದಿನಾಂಕ : 01-12-2009) ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮುಂಚೆ ಸಾರ್ವಜನಿಕ ಆಲಿಕೆಯನ್ನು ನಿರ್ಧರಿಸಿದ ಯೋಜನೆಯ ಸ್ಥಳದಲ್ಲಿ ಜರುಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದನ್ನು ಜಿಲ್ಲಾಧಿಕಾರಿಗಳು ಅಥವಾ ಇತರೆ ಹೆಚ್ಚುವರಿ ಜಿಲ್ಲಾಧಿಕಾರಿಗಳವರ ಹುದ್ದೆಗಿಂತ ಕೆಳಗಿರದಂತಹ ಅಧಿಕಾರಿಗಳ ಸಭಾಧ್ಯಕ್ಷತೆಯಲ್ಲಿ ಜರುಗತಕ್ಕದು.

ರಾಜ್ಯ ಮಟ್ಟದ ಅಪ್ರೈಸಲ್ ತಜ್ಞರ ಸಮಿತಿ, ಕರ್ನಾಟಕ, ಇವರ Terms of reference ಪತ್ರದ ಸಂಖ್ಯೆ: SEIAA 17 IND 2015, ದಿನಾಂಕ: 10-09-2015ರಂತೆ ಹಾಗೂ ಜಿಲ್ಲಾಧಿಕಾರಿಗಳು, ಬೆಳಗಾವಿ, ಇವರ ಪತ್ರದ ದಿನಾಂಕ: 30-06-2016ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ದಿನಾಂಕ: 12-08-2016 ರಂದು ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕ ವಿಚಾರಣಾ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಆಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ: 01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯದಲ್ಲಿ ಪ್ರಚಲಿತವಿರುವ **"ವಿಜಯವಾಣಿ"** ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಚಲಿತವಿರುವ **"The Deccan Herald"** ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ: 11-07-2016ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ **"ಸಮದರ್ಶಿ"**ದಲ್ಲಿ ದಿನಾಂಕ: 15-07-2016 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿಗಳು ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಸಾರ್ವಜನಿಕ ವಿಚಾರಣಾ ಸಮಿತಿ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಿವೀಕ್ಷಣೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರ ಕಾರ್ಯಾಲಯ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ.
- ಪುರಸಭೆ, ರಾಯಬಾಗ.
- ಗ್ರಾಮ ಪಂಚಾಯತ ಕಾರ್ಯಾಲಯ, ಸೌಂದತ್ತಿ ಹಾಗೂ ಯಡ್ರಾವಿ ಗ್ರಾಮಗಳು.
- ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ.
- ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ-02 (ಚಿಕ್ಕೋಡಿ ಕೇಂದ್ರ).
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ ಕಛೇರಿ ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ ಕೋರಮಂಗಲ, ಬೆಂಗಳೂರು.
- ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ ಚರ್ಚ್‌ಸ್ಟ್ರೀಟ, ಬೆಂಗಳೂರು.

➢ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು, ಬೆಳಗಾವಿ, ಇವರು ಸಾರ್ವಜನಿಕ ಆಲಿಕೆ ಪಟ್ಟಿ, ಜಾಹೀರಾತುಗಳಲ್ಲಿ ನೀಡಿದ ಎಲ್ಲ ಅಧಿಸೂಚನೆಗಳನ್ನು ಕೂಲಕುಂಷವಾಗಿ ಪರಿಶೀಲಿಸಿ ಇವುಗಳಿಂದ ಸಮರ್ಪಕ ಪ್ರಕಟಣೆಯಾಗಿದೆಯೋ ಹೇಗೆ ಎಂಬುದನ್ನು ಅವಲೋಕಿಸಿದರು ಹಾಗೂ ಇದು ಕಾನೂನಿನ ಅಧಿನಿಯಮಾನುಸಾರವಾಗಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಿದರು.

ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ-02 (ಚಿಕ್ಕೋಡಿ ಕೇಂದ್ರ) ಇವರಲ್ಲಿ ದಿನಾಂಕ: 11-08-2016 ರವರೆಗೆ ಎರಡು ಈ-ಮೇಲ್ ಅರ್ಜಿಯು ಸ್ವೀಕೃತವಾಗಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿವೆ.

1. ಶ್ರೀ. **ಸುನಂದಾ ರೆಡ್ಡಿ**, ಪರಿಸರವಾದಿಗಳು ನಾಲಗೌಡಾ ಜಿಲ್ಲೆ, ತೆಲಾಂಗನ ರಾಜ್ಯ ಇವರಿಂದ ದಿನಾಂಕ: 19-07-2016,
2. ಶ್ರೀ. **ಎಚ್.ಮಧುಬಾಬು**, ಪರಿಸರವಾದಿಗಳು ಇವರಿಂದ ದಿನಾಂಕ: 05-08-2016, ಇವುಗಳ ಪ್ರತಿಯನ್ನು **ಅನುಬಂಧ-1**ರ ಮೂಲಕ ಲಗತ್ತಿಸಲಾಗಿದೆ.

ದಿನಾಂಕ: 12-08-2016 ರಂದು ಜರುಗಿಸಿದ ಸಾರ್ವಜನಿಕ ವಿಚರಣಾ ಸಭೆಗೆ ಆಗಮಿಸಿದ ಜಿಲ್ಲಾಧಿಕಾರಿಗಳು ಬೆಳಗಾವಿ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ **ಶ್ರೀ. ಎಮ್. ಎ. ಮುನಿಯಾರ, ಪರಿಸರ ಅಧಿಕಾರಿಗಳು** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಾರ್ಯಾಲಯ ಬೆಳಗಾವಿ-2 (ಚಿಕ್ಕೋಡಿ ಕೇಂದ್ರ) ಇವರು ಆತ್ಮೀಯವಾಗಿ ಸ್ವಾಗತಿಸಿದರು. ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಈಐಏ ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ವಿಚಾರಣೆಯ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಜಿಲ್ಲಾಧಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೋರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೋರಿದರು. ಸಭೆಯ ನಡುವಳಿಗಳನ್ನು ವಿಡಿಯೋ ಗ್ರಾಪ ಮಾಡಲಾಗುವುದು ಎಂದು ವಿವರಿಸಿದರು.

ಮೇ॥ Mitcon Consultancy and Engineering Services Ltd., ಸಂಸ್ಥೆಯ **ಪರಿಸರ ತಜ್ಞರಾದ ಶ್ರೀ. ಎಮ್. ಎಮ್. ಕೋರಿ,** ಇವರು ಕನ್ನಡದಲ್ಲಿ ನಿಯೋಜಿತ ಯೋಜನೆಯ ಉದ್ದೇಶಗಳ ಬಗ್ಗೆ Power Point Presentation ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು. **ಇವುಗಳ ಹಾರ್ಡಕಾಪಿಯನ್ನು** ಅನುಬಂಧ-2 ರ **ಮೂಲಕ ಲಗತ್ತಿಸಲಾಗಿದೆ.**

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸುತ್ತಮುತ್ತಲಿನ ಗ್ರಾಮಸ್ಥರು, ಸರ್ಕಾರ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರ-ಕರ್ತರು, ಹಾಗೂ ಆಸಕ್ತಿ ಹೊಂದಿದ ಇತರರು ಸದರಿ ಸಭೆಯಲ್ಲಿ ಭಾಗವಹಿಸಿದ್ದರು. **ಸಭೆಯಲ್ಲಿ ಭಾಗವಹಿಸಿದವರ ಯಾದಿಯನ್ನು ಅನುಬಂಧ-3ರಲ್ಲಿ ಲಗತ್ತಿಸಲಾಗಿದೆ.** ಜಿಲ್ಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿಯೂ ನೀಡಬಹುದೆಂದು ಸೂಚಿಸಿದರು.

ಸಾರ್ವಜನಿಕ ವಿಚಾರಣೆಯ ಕಾಲಕ್ಕೆ 06 ಜನರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು ಮತ್ತು ಕಾರ್ಖಾನೆಯವರು ಅದಕ್ಕೆ ತಕ್ಕಂತೆ ಸ್ಪಷ್ಟನೆ ನೀಡಿದ್ದು ಅದರ ವಿವರಗಳು ಈ ಕೆಳಗಿನಂತಿವೆ.

**1) ಶ್ರೀ ಅಪ್ಪಾಸಾಬ ಬಂಡು ಮೈಶಾಳೆ ಸಾ॥ ದಿಗ್ಗೇವಾಡಿ**

- ಸದರಿಯವರು ಈ ಭಾಗದ ರೈತರ ಕಲ್ಯಾಣಕ್ಕಾಗಿ ಮಣ್ಣು ಪರೀಕ್ಷಾ ಕೇಂದ್ರವನ್ನು ಮತ್ತು ಕೃಷಿ ಸಂಶೋಧನೆ ಕೇಂದ್ರವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು.
- ಇದರಿಂದ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾಗಿ ರೈತರಿಗೆ ಹಾಗೂ ನಿಯೋಜಿತ ಘಟಕಕ್ಕೆ ಅನುಕೂಲವಾಗುವುದೆಂದು ಅಭಿಪ್ರಾಯಪಟ್ಟರು.

81

➢ ಇದಕ್ಕೆ ಸ್ಪಷ್ಟನೆ ನೀಡುವಂತೆ ಜಿಲ್ಲಾಧಿಕಾರಿಗಳು ಕಾರ್ಖಾನೆಯವರಿಗೆ ಸೂಚಿಸಿದರು.

ಸ್ಪಷ್ಟನೆ:

➢ ಇದಕ್ಕೆ ಕಾರ್ಖಾನೆಯ ಪರಿಸರ ಸಲಹೆಗಾರರು ಕಾರ್ಖಾನೆಯು ಈಗಾಗಲೇ ಮಣ್ಣು ಪರೀಕ್ಷಣಾ ಕೇಂದ್ರವನ್ನು ಸ್ಥಾಪಿಸಿದ್ದು ಮಣ್ಣಿನ ಮಾದರಿಗಳನ್ನು ಪರೀಕ್ಷಣೆ ಮಾಡಲಾಗುತ್ತಿದೆ. ಹಾಗೂ ಮಣ್ಣಿನಲ್ಲಿಯ ಪೊಟ್ಯಾಶಿಯಂ ಪ್ರಮಾಣದ ಆಧಾರದ ಮೇಲೆ ರೈತರಿಗೆ ಬೂದಿಯನ್ನು ನೀಡಲಾಗುವದೆಂದು ತಿಳಿಸಿದರು.

### 2) ಶ್ರೀ ಮಧುಕರ ಸದಾಶಿವ ಬಾಡಗೆ ಸಾ॥ ಇಂಗಳಿ

- ಇವರು ಕಾರ್ಖಾನೆಯ ಉದ್ದೇಶಿತ ಯೋಜನೆಯ ವಿಸ್ತಾರದಿಂದ ಸ್ಥಳೀಯರಿಗೆ ಆಗುವ ಅನುಕೂಲವೇನೆಂದು ಪ್ರಶ್ನಿಸಿದರು?

ಸ್ಪಷ್ಟನೆ:

➢ ಉದ್ಧೇಶಿತ ಕಾರ್ಯಸಾಮರ್ಥ್ಯ ವಿಸ್ತರಣೆಯಿಂದಾಗಿ ಯೋಜನೆಯ ನಿರ್ಮಾಣ ಹಂತದಲ್ಲಿ 250 ಜನರಿಗೆ, ಕಾರ್ಯ ಪ್ರಾರಂಭದ ನಂತರ 500 ಜನರಿಗೆ ಹಾಗೂ ಅಪ್ರತ್ಯಕ್ಷವಾಗಿ ಸುಮಾರು 1000 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ ಎಂದು ಪರಿಸರ ಸಲಹೆಗಾರರು ತಿಳಿಸಿದರು.

### 3) ಶ್ರೀ ಬಸಗೌಡಾ ಸದಾಶಿವ ಪಾಟೀಲ ಸಾ॥ ಯಡ್ರಾವಿ

- ಸದರಿ ಘಟಕದ ಸ್ಥಾಪನೆಯಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳು ಲಭ್ಯವಾಗಲಿದ್ದು. ಇದರಿಂದ ಈ ಭಾಗದ ಗ್ರಾಮಸ್ಥರಿಗೆ ಅನೂಕೂಲವಾಗುವದೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು.
- ನಿಯೋಜಿತ ಘಟಕದಲ್ಲಿ ಸ್ಥಳೀಯ ನಿರುದ್ಯೋಗ ಜನರಿಗೆ ಅವರ ವಿದ್ಯಾರ್ಹತೆ ಹಾಗೂ ಅನುಭವದ ಆಧಾರದ ಮೇಲೆ ಉದ್ಯೋಗವನ್ನು ನೀಡಬೇಕೆಂದು ಮನವಿ ಮಾಡಿದರು.

ಸ್ಪಷ್ಟನೆ:

➢ ಈ ವಿಷಯದ ಕುರಿತು ಈಗಾಗಲೇ ಸ್ಪಷ್ಟನೆ ನೀಡಲಾಗಿದೆ ಎಂದು ಕಾರ್ಖಾನೆಯವರು ತಿಳಿಸಿದರು.

4) ಶ್ರೀ ಮಹಾವೀರ ಕಲ್ಲಪ್ಪಾ ಪಾಟೀಲ ಸಾ॥ ನಸಲಾಪೂರ

- ಇವರು ಉದ್ದೇಶಿತ ಕಾರ್ಯಸಾಮರ್ಥ್ಯ ವಿಸ್ತರಣೆಯಿಂದಾಗುವ ವಾಯುಮಾಲಿನ್ಯ ಮತ್ತು ಶಬ್ದ ...ಗಳ ನಿಯಂತ್ರಣಕ್ಕೆ ಕೈಕೊಳ್ಳಲಿರುವ ಕ್ರಮಗಳೇನೆಂದು ಪ್ರಶ್ನಿಸಿದರು?

...

- ಇದಕ್ಕೆ ಪ್ರತಿಯಾಗಿ ನಿರ್ಮಾಣ ಹಂತದಲ್ಲಿ ಭೂಅಗೆತ, ವಾಹನಗಳ ಚಲನೆಯಿಂದಾಗಿ ಉತ್ಪತ್ತಿಯಾಗುವ ಧೂಳಿನ ನಿಯಂತ್ರಣಕ್ಕೆ ನೀರು ಸಿಂಪಡಣೆ ಮತ್ತು ಹಸಿರು ವಲಯಗಳ ಪಟ್ಟಿ ನಿರ್ಮಿಸಲಾಗುವುದು.
- ... ಹಬೆ ಯಂತ್ರಕ್ಕಾಗಿ ಅತ್ಯಾಧುನಿಕ ಮಾಲಿನ್ಯ ನಿಯಂತ್ರಣ ವ್ಯವಸ್ಥೆ (ಎಲೆಕ್ಟ್ರೋ ಸ್ಟ್ಯಾಟಿಕ್ ಪ್ರಿಸಿಪಿಟೇಟರ) ಅಳವಡಿಸಲಾಗುವದು ಮತ್ತು 90ಮೀಟರ ಎತ್ತರದ ಹೊಗೆ ಕೊಳವೆ ನಿರ್ಮಿಸಲಾಗುವುದು.
- ...ಲ್ಲಿದ್ದಲು ಪುಡಿ ಮಾಡುವ ಯಂತ್ರಗಳಿಂದ ಬರುವ ಧೂಳನ್ನು ತಡೆಗಟ್ಟಲು ಸೋಸು ...ಚೀಲಗಳನ್ನೊಳಗೊಂಡ (ಬ್ಯಾಗಫಿಲ್ಟರ್ಸ) ನಿಯಂತ್ರಣ ಉಪಕರಣಗಳನ್ನು ಅಳವಡಿಸಲಾಗುವುದು.
- ಶಬ್ದ ಮಾಲಿನ್ಯ ನಿಯಂತ್ರಣಕ್ಕೆ ಡಿಜೇಲ್ ಜನರೇಟರ ಮತ್ತು ಸಹವಿದ್ಯುತ್ ಯಂತ್ರೋಪಕರಣಗಳಿಗೆ ಶಬ್ದ ನಿಯಂತ್ರಕ ಉಪಕರಣಗಳು ಮತ್ತು ಕವಚಗಳನ್ನು ಅಳವಡಿಸಲಾಗಿದೆ.

5) ಶ್ರೀ ಸಿದ್ದಪ್ಪಾ ಗಾಯಗೋಳ ಸಾ॥ ಮಾಂಜರಿ

- ಯೋಜನೆಯಿಂದ ಉತ್ಪಾದನೆಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಕೈಕೊಳ್ಳುವ ಕ್ರಮವೇನೆಂದು ಪ್ರಶ್ನಿಸಿದರು?

ಸ್ಪಷ್ಟನೆ:

- ...ತ್ತಿಯಾಗುವ ಘನತ್ಯಾಜ್ಯ ವಸ್ತುಗಳಾದ ಕಾಕಾಂಬಿ(ಮೊಲ್ಯಾಸಿಸ್) ಅಬಕಾರಿ ಇಲಾಖೆಯ ನಿಯಮಗಳನ್ವಯ ಸಂಗ್ರಹಿಸಿ ಮಧ್ಯಸಾರ ಉತ್ಪಾದನೆಗೆ ಕೊಳವೆಗಳ ಮುಖಾಂತರ ವರ್ಗಾಯಿಸಿ ಉಪಯೋಗಿಸಲಾಗುವುದು.
- ಮೊಲ್ಯಾಸಿಸ್ ಕೆಳಗೆ ಬೀಳದಂತೆ ಅವಶ್ಯಕ ಕ್ರಮ ಕೈಕೊಳ್ಳಲಾಗುವುದು.
- ...ಗೆಯಲ್ಲಿ ಉಷ್ಣತೆಯಿಂದಾಗಿ ಆಗಬಹುದಾದ ಬೆಂಕಿ ಅನಾಹುತಗಳನ್ನು ತಪ್ಪಿಸಲು ಅಗ್ನಿಶಾಮಕ ಉಪಕರಣಗಳನ್ನು ಒದಗಿಸಲಾಗುವುದು ಹಾಗೂ ಸಂಗ್ರಹ ಟ್ಯಾಂಕಗಳನ್ನು ತಂಪಾಗಿಸುವ ವ್ಯವಸ್ಥೆಯನ್ನು ಮಾಡಲಾಗುವುದು.

- ಮತ್ತೊಂದು ಘನ ತ್ಯಾಜ್ಯವಸ್ತುವಾದ ಮಳ್ಳಿ ಗೊಬ್ಬರವನ್ನು ಕೃಷಿ ಬಳಕೆಗಾಗಿ ರೈತರಿಗೆ ಮಾರಾಟ ಮಾಡಲಾಗುವುದು.
- ತ್ಯಾಜ್ಯ ನೀರು ಸಂಸ್ಕರಣ ಘಟಕದ ಘನತ್ಯಾಜ್ಯವನ್ನು ಕಾರ್ಖಾನೆಯಿಂದ ನಿರ್ಮಿಸಲಾಗುವ ಹೂದೋಟ, ಹಸಿರು ವಲಯದ ಪಟ್ಟಿಗೆ ಗೊಬ್ಬರವನ್ನಾಗಿ ಉಪಯೋಗಿಸಲಾಗುವುದು.

- **ಈ ಮಧ್ಯೆ ಸದರಿ ಯೋಜನೆಗೆ ಹತ್ತಿರದಲ್ಲಿ ಇನ್ನೂ ಕಾರ್ಯಾರಂಭ ಮಾಡಲಿರುವ ಮಧ್ಯಸಾರ ಘಟಕದ ಪ್ರಾರಂಭದಿಂದ ಪರಿಸರದಲ್ಲಾಗುವ ಪರಿಣಾಮಗಳನ್ನು ಸದರಿ ವರದಿಯಲ್ಲಿ ಪರಿಗಣಿಸಲಾಗಿದೆಯೇ? ಎಂದು ಮಾನ್ಯ ಜಿಲ್ಲಾಧಿಕಾರಿಗಳು ಕಾರ್ಖಾನೆಯವರಿಗೆ ಕೇಳಿದರು.**

**ಸ್ಪಷ್ಟನೆ:**

- ಇದಕ್ಕೆ ಪ್ರತಿಯಾಗಿ ಕಾರ್ಖಾನೆ ಪ್ರಾರಂಭಿಸಲಿರುವ ನಿರ್ಮಾಣದ ಹಂತದಲ್ಲಿರುವ 100 ಕೆಎಲ್‌ಪಿಡಿ ಮಧ್ಯಸಾರ ಘಟಕದ ಪ್ರಾರಂಭದಿಂದ ಪರಿಸರದಲ್ಲಾಗುವ ಪರಿಣಾಮಗಳನ್ನು ಸಹ ವರದಿಯಲ್ಲಿ ಪರಿಗಣಿಸಲಾಗಿದೆ ಎಂದು ಕಾರ್ಖಾನೆಯವರು ತಿಳಿಸಿದರು.

**6) ಶ್ರೀ ಸತ್ಯಪ್ಪಾ ಬಾಳಪ್ಪಾ ಜಲಾಲಪುರೆ ಸಾ॥ ದಿಗ್ಗೇವಾಡಿ**

- ಮೇ॥ ಶಿವಶಕ್ತಿ ಸಕ್ಕರೆ ಕಾರ್ಖಾನೆಯೂ ಈಗ ಹೊಂದಿರುವ 4800 ಟಿಸಿಡಿ ಕಬ್ಬು ನುರಿಸುವ ಕಾರ್ಯಸಾಮರ್ಥ್ಯದಿಂದ ಕಾರ್ಯಕ್ಷೇತ್ರದಲ್ಲಿಯ ರೈತರ ಕಬ್ಬನ್ನು ಸರಿಯಾದ ಸಮಯಕ್ಕೆ ಕಟಾವು ಮಾಡಿ ನುರಿಸಲು ಆಗುತ್ತಿಲ್ಲ.
- ಕಾರ್ಖಾನೆಯ ಉದ್ದೇಶಿತ ಕಾರ್ಯಸಾಮರ್ಥ್ಯವನ್ನು 10000 ಟಿಸಿಡಿಗೆ ಹೆಚ್ಚಿಸಿದಲ್ಲಿ ರೈತರ ಕಬ್ಬನ್ನು ಕಾಲಮಿತಿಯಲ್ಲಿ ಕಟಾವು ಮಾಡಿ ನುರಿಸುವದರಿಂದ ರೈತರಿಗೆ ಮತ್ತೊಂದು ಬೆಳೆ ಬೆಳೆಯಲು ಅನುಕೂಲವಾಗುತ್ತದೆ.
- ಇದರಿಂದ ರೈತರ ಆರ್ಥಿಕತೆ ಮೇಲ್ಮಟ್ಟಕ್ಕೆ ಏರುತ್ತದೆ ಎಂದು ಅಭಿಪ್ರಾಯಪಟ್ಟರು.
- ಆದ್ದರಿಂದ ಕಾರ್ಖಾನೆಯ ಉದ್ದೇಶಿತ ಕಾರ್ಯಸಾಮರ್ಥ್ಯ ವಿಸ್ತರಣೆಗೆ ಅನುಮತಿ ನೀಡಬೇಕೆಂದು ಸಭೆಯನ್ನು ಕೇಳಿಕೊಂಡರು.

... ಎನ್. ಜಯರಾಮ ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಅಧ್ಯಕ್ಷರು ಸಭೆಯಲ್ಲಿ ... ಸಾರ್ವಜನಿಕರು ಕೇಳಿದ ಪ್ರಶ್ನೆಗಳು ಮತ್ತು ಈ ಪ್ರಶ್ನೆಗಳಿಗೆ ಪರಿಸರ ತಜ್ಞರು ನೀಡಿದ ... ಮತ್ತು ಘಟಕದ ಸ್ಥಾಪನೆಯ ಅವಶ್ಯಕತೆ ಮತ್ತು ಘಟಕದ ಸ್ಥಾಪನೆಯಿಂದಾಗಬಹುದಾದ ... ಮತ್ತು ಅವುಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಘಟಕದ ಮಾಲಿಕರು ನೀಡಿದ ... ಅವಲೋಕಿಸಿ ಈ ಕೆಳಗಿನಂತೆ ಸಲಹೆ ಸೂಚನೆಗಳನ್ನು ನೀಡಿದರು.

- ಕಾರ್ಖಾನೆಯ ಆವರಣದಲ್ಲಿ ಪ್ರತಿ ವರ್ಷ 10000 ದಂತೆ 5 ವರ್ಷ ಸಸಿಗಳನ್ನು ನೆಡಬೇಕೆಂದು ಹಸಿರು ಪಟ್ಟಿಯನ್ನು ನಿರ್ಮಿಸಬೇಕು ಅದಕ್ಕಾಗಿ ಸ್ಥಳೀಯ ಗ್ರಾಮ ಪಂಚಾಯತ ಹಾಗೂ ಅರಣ್ಯ ಇಲಾಖೆಯ ಸಹಕಾರವನ್ನು ಪಡೆಯಬಹುದು.

- ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ತೀವ್ರ ಕ್ರಮ ಕೈಗೊಳ್ಳುವುದು.

- ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಧೂಳು ನಿಯಂತ್ರಣಕ್ಕಾಗಿ ಸೂಕ್ತ ಉಪಕರಣಗಳನ್ನು ಅಳವಡಿಸಿ ಸುತ್ತ ಮುತ್ತಲಿನ ಗ್ರಾಮಸ್ಥರ ಹಾಗೂ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಚ್ಚರಿಕೆ ವಹಿಸುವುದು.

- ನೀರು ಬಳಕೆಗಾಗಿ ಮಳೆ ನೀರು ಕೋಯ್ಲಿ ಪದ್ದತಿಯನ್ನು ಅಳವಡಿಸಿಕೊಳ್ಳುವುದು.

- ಕಾರ್ಖಾನೆಯಲ್ಲಿ ವಿನಾಯಿತಿ ಮೇರೆಗೆ ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

- ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಸುತ್ತಮುತ್ತಲಿನ ಗ್ರಾಮಗಳ ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಸೇವೆಗಳಿಗೆ ಆದ್ಯತೆ ನೀಡುವುದು.

- ಕಾರ್ಖಾನೆಯಿಂದ ಹೊರ ಬರುವ ನೀರನ್ನು ಹಾಗೂ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು. ... ಭೂಮಿಯಲ್ಲಿ ಇಂಗಿ ಆ ಪ್ರದೇಶದಲ್ಲಿರುವ ಕೊಳವೆ ಬಾವಿ ಹಾಗೂ ತೆರವು ಬಾವಿಗಳ ನೀರಿನ ಮೇಲೆ ಪ್ರತಿಕೂಲ ಪರಿಣಾಮವಾಗದಂತೆ ನೋಡಿಕೊಳ್ಳುವುದು.

ಸಭೆಯಲ್ಲಿ ಕೇಳಲಾದ ಪ್ರಶ್ನೆಗಳು, ಆಕ್ಷೇಪಣೆಗಳು ಹಾಗೂ ಅವುಗಳಿಗೆ ನೀಡಿದ ಉತ್ತರ ಇವೆಲ್ಲವುಗಳನ್ನು ವಿಡಿಯೋ ರೇಕಾರ್ಡಿಂಗ ಮಾಡಲಾಗಿದ್ದು ಅದನ್ನು ಸರ್ಕಾರದ ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಸಹಿಸಲಾಗುವುದೆಂದು ತಿಳಿಸಿದರು. ಕಾರಣ ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಗ್ರಾಮಸ್ಥರ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಲ್ಲಾ ಅವಶ್ಯಕ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರು ಸಭೆಯ ಆಯೋಜಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ನಂತರ ಸಾರ್ವಜನಿಕ ಅಭಿಪ್ರಾಯವನ್ನು ಆಲಿಸಿ ಸಭೆಗೆ ಉಪಸ್ಥಿತರಿದ್ದ ಎಲ್ಲಾ ಸಾರ್ವಜನಿಕರು ನಿಯೋಜಿತ ಘಟಕದ ಸ್ಥಾಪನೆಯ ಕುರಿತು ಅಭಿಪ್ರಾಯವನ್ನು ದಾಖಲಿಸಿಲಾಯಿತು.

ಅಂತಿಮವಾಗಿ ಶ್ರೀ. ಎಮ್ ಏ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ ಕೇಂದ್ರ), ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಘಟಕದ ಸಂಚಾಲಕರಿಗೆ, ಸಿಬ್ಬಂದಿಗಳಿಗೆ, ಸಾರ್ವಜನಿಕ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂದಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

(ಎನ್. ಜಯರಾಮ)
ಜಿಲ್ಲಾಧಿಕಾರಿಗಳು ಬೆಳಗಾವಿ ಮತ್ತು
ಅಧ್ಯಕ್ಷರು ಸಾರ್ವಜನಿಕ ವಿಚಾರಣಾ
ಸಮೀತಿ ಬೆಳಗಾವಿ, ಕರ್ನಾಟಕ.